### ಕೇಂದ್ರದ ಸುತ್ತ ಮೂರು ಹಂತದ ಭದ್ರತೆ | 544 ಸಿಬ್ಬಂದಿ ನಿಯೋಜನೆ

# ಮತಎಣಿಕೆ: ಕಾತರಕ್ಕೆ ಇಂದು ಉತ್ತರ

**ವಿಕ ಸುದ್ದಿಲೋಕ** ಮಂಗಳೂರು

ರಾಜ್ಯ ವಿಧಾನಸಭೆ ಚುನಾವಣೆಯ ದಕ್ಷಿಣ ಕನ್ನಡ ಜಿಲ್ಲೆಯ ಮತ ಎಣಿಕೆ ಕಾರ್ಯ ಸುರತ್ಕಲ್ ಎನ್ಐಟಿಕೆಯಲ್ಲಿ ನಡೆಯಲಿದ್ದು, ಪೂರ್ವ ಸಿದ್ಧತೆಗಳು ಪೂರ್ಣಗೊಂಡಿವೆ. ಬೆಳಗ್ಗೆ 8 ಗಂಟೆಗೆ ಮತ ಎಣಿಕೆ ಕಾರ್ಯ ಆರಂಭವಾಗಲಿದ್ದು, ಮಧ್ಯಾಹ್ನ 2 ಗಂಟೆಯೊಳಗೆ ಸಂಪೂರ್ಣ ಫಲಿತಾಂಶ ಪ್ರಕಟವಾಗಲಿದೆ ಎಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ರವಿಕುಮಾರ್ ಎಂ.ಆರ್. ತಿಳಿಸಿದ್ದಾರೆ.

ಎನ್ಐಟಿಕೆ ಮತ ಎಣಿಕೆ ಕೇಂದ್ರದಲ್ಲಿರುವ ಮಾಧ್ಯಮ ಕೇಂದ್ರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ವಿಧಾನಸಭೆ ಕ್ಷೇತ್ರದ ಇವಿಎಂ ಮತ ಎಣಿಕೆಗೆ 14 ಟೇಬಲ್ ಹಾಗೂ ಪೋಸ್ಟಲ್ ಎಣಿಕೆಗೆ 5 ಟೇಬಲ್ ಸೇರಿದಂತೆ ಒಟ್ಟು ಇವಿಎಂಗೆ 112 ಮತ್ತು ಪೋಸ್ಟಲ್‌ಗೆ 40 ಟೇಬಲ್ ಸಿದ್ಧಗೊಳಿಸಲಾಗಿದೆ. ಪ್ರತಿ ಟೇಬಲ್‌ಗೆ ಒಬ್ಬ ಕೌಂಟಿಂಗ್ ಆಫೀಸರ್, ಮೇಲ್ವಿಚಾರಕರು, ಮೈಕ್ರೊ ಆಫೀಸರ್ ನಿಯೋಜಿಸಲಾಗಿದೆ. 8 ಗಂಟೆಗೆ ಸರಿಯಾಗಿ ಅಂಚೆ ಮತದಾನ ಎಣಿಕೆ ಆರಂಭವಾಗಲಿದ್ದು, 8.30ರಿಂದ ಇವಿಎಂ ಮತ ಎಣಿಕೆ ನಡೆಯಲಿದೆ. ಅಂಚೆ ಮತದಾನ ಮತ್ತು ಇವಿಎಂ ಮತಎಣಿಕೆ ಬೇರೆ ಬೇರೆ ವಿಭಾಗದಲ್ಲಿ ಮುಂದುವರಿಯಲಿದೆ. ಪ್ರತಿಯೊಂದು ಮತ ಎಣಿಕೆ ಟೇಬಲ್‌ಗೆ ಸಿಸಿ ಕ್ಯಾಮೆರಾ ಅಳವಡಿಸಿದ್ದು, ಎಣಿಕೆ ಕಾರ್ಯವನ್ನು ರಾಜ್ಯ ಮತ್ತು ಕೇಂದ್ರ ಚುನಾವಣಾ ಆಯೋಗ ಅಧಿಕಾರಿಗಳು ನೇರ ವೀಕ್ಷಣೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಮತ ಎಣಿಕೆ ಕೇಂದ್ರದ ಸುತ್ತ ಪಾರಾ ಮಿಲಿಟರಿ, ಜಿಲ್ಲಾ ಮತ್ತು ನಗರ ಪೊಲೀಸರು ಬಿಗಿ ಬಂದೋಬಸ್ತ್ ವ್ಯವಸ್ಥೆ ನೋಡಿಕೊಳ್ಳಲಿದ್ದಾರೆ. ಅಗ್ನಿಶಾಮಕ ಪಡೆ, ಮೆಸ್ಕಾಂ ತಂಡ ಸನ್ನದ್ಧವಾಗಿದೆ ಎಂದರು.

**ನಾನಾ ಸುತ್ತುಗಳಲ್ಲಿ ಮತ ಎಣಿಕೆ:** ಮತ ಎಣಿಕೆಗೆ 544 ಸಿಬ್ಬಂದಿ ನಿಯೋಜಿಸಲಾಗಿದ್ದು, ಬೆಳ್ತಂಗಡಿ 18 ಸುತ್ತು, ಮೂಡುಬಿದಿರೆ 16, ಮಂಗಳೂರು ದಕ್ಷಿಣ 16, ಮಂಗಳೂರು ಉತ್ತರ 16, ಮಂಗಳೂರು 15, ಬಂಟ್ವಾಳ 18, ಪುತ್ತೂರು 16, ಸುಳ್ಯ 17 ಸುತ್ತುಗಳಲ್ಲಿ ಮತ ಎಣಿಕೆ ನಡೆಯಲಿದೆ. ಮತ ಎಣಿಕೆ ಮುಗಿದ ಬಳಿಕ ಆ ಮೆಷಿನ್‌ನ್ನು ವೇರ್‌ಹೌಸ್‌ಗೆ ಸಾಗಿಸಿ ಭದ್ರವಾಗಿಡಲಾಗುವುದು.

ದಕ್ಷಿಣ ಕನ್ನಡ ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಕುಮಾರ್, ಹೆಚ್ಚುವರಿ ಜಿಲ್ಲಾಧಿಕಾರಿ ಕೃಷ್ಣಮೂರ್ತಿ, ಮಂಗಳೂರು ನಗರ ಪಾಲಿಕೆ ಆಯುಕ್ತ ಚನ್ನಬಸಪ್ಪ ಉಪಸ್ಥಿತರಿದ್ದರು.



## 60 ಅಭ್ಯರ್ಥಿಗಳಲ್ಲಿ ಗೆಲ್ಲುವವರು 8 ಮಂದಿ !

ರಾಜ್ಯ ವಿಧಾನಸಭೆ ಚುನಾವಣೆಯ ಮತ ಎಣಿಕೆ ಕಾರ್ಯ ಮೇ 13ರಂದು ಬೆಳಗ್ಗಿನಿಂದ ಆರಂಭವಾಗಲಿದ್ದು 60 ಅಭ್ಯರ್ಥಿಗಳ ರಾಜಕೀಯ ಭವಿಷ್ಯ ನಿರ್ಧಾರವಾಗಲಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 8 ಕ್ಷೇತ್ರದಲ್ಲಿ ಒಟ್ಟು 60 ಮಂದಿ ಸ್ಪರ್ಧೆಯಲ್ಲಿದ್ದು, ಮಂಗಳೂರು ನಗರ ದಕ್ಷಿಣ-8, ಮಂಗಳೂರು ನಗರ ಉತ್ತರ- 10, ಮಂಗಳೂರು ಕ್ಷೇತ್ರ-5, ಮೂಡುಬಿದಿರೆ- 8, ಪುತ್ತೂರು-8, ಬಂಟ್ವಾಳ-5, ಬೆಳ್ತಂಗಡಿ-8, ಸುಳ್ಯ-8 ಅಭ್ಯರ್ಥಿಗಳಿದ್ದಾರೆ. ಇದರಲ್ಲಿ ಪುತ್ತೂರು ಮತ್ತು ಸುರತ್ಕಲ್ ಹೊರತುಪಡಿಸಿ ಉಳಿದ ಎಲ್ಲ ವಿಧಾನಸಭೆ ಕ್ಷೇತ್ರದಲ್ಲೂ ಬಿಜೆಪಿ ಮತ್ತು ಕಾಂಗ್ರೆಸ್ ನೇರ ಸ್ಪರ್ಧೆ ನಡೆಯಲಿದೆ. ರಾಜ್ಯಾದ್ಯಂತ ಮೇ 10ರಂದು ಚುನಾವಣೆ ನಡೆದಿದ್ದು, ಅಭ್ಯರ್ಥಿಗಳ ಭವಿಷ್ಯ ಸುರತ್ಕಲ್ ಎನ್ಐಟಿಕೆಯ ಸ್ಟ್ರಾಂಗ್ ರೂಂನಲ್ಲಿ ಭದ್ರವಾಗಿದೆ.

## 144ರನ್ವಯ ನಿಷೇಧಾಜ್ಞೆ ಜಾರಿ

ಮತ ಎಣಿಕೆ ಮುಕ್ತ ಹಾಗೂ ಶಾಂತಿಯುತವಾಗಿ ನಡೆಸುವ ದೃಷ್ಟಿಯಿಂದ ಹಾಗೂ ಜಿಲ್ಲೆಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಮೇ 13ರ ಬೆಳಗ್ಗೆ 5 ಗಂಟೆಯಿಂದ ಮಧ್ಯರಾತ್ರಿ 12ರವರೆಗೆ ಮತ ಎಣಿಕೆ ಕೇಂದ್ರ ಸೇರಿದಂತೆ ಜಿಲ್ಲೆಯಾದ್ಯಂತ 144ರನ್ವಯ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ಕಾನೂನು ಬಾಹಿರವಾಗಿ ಗುಂಪು ಸೇರುವುದು, ವಿಜಯೋತ್ಸವ ಮಾಡುವುದು, ಮೆರವಣಿಗೆ ನಡೆಸುವುದನ್ನು ನಿರ್ಬಂಧಿಸಲಾಗಿದೆ.

**ಮದ್ಯಪಾನ ಮಾರಾಟ ನಿಷೇಧ:** ಮೇ 12ರ ಮಧ್ಯರಾತ್ರಿ 12ರಿಂದ ಮೇ 13ರ ಮಧ್ಯರಾತ್ರಿ 12ರವರೆಗೆ ಮದ್ಯ ಮಾರಾಟ ನಿಷೇಧಿಸಲಾಗಿದೆ.

## ಮೂರು ಹಂತದಲ್ಲಿ ಭದ್ರತೆ ವ್ಯವಸ್ಥೆ

ಮತ ಎಣಿಕೆ ಕೇಂದ್ರದ ಸುತ್ತ ಮೂರು ಹಂತದ ಭದ್ರತೆ ವ್ಯವಸ್ಥೆ ಮಾಡಲಾ ಗಿದ್ದು, 100 ಮೀ. ವ್ಯಾಪ್ತಿಯೊಳಗೆ ಅನಧಿಕೃತ ವ್ಯಕ್ತಿ, ವಾಹನ ಪ್ರವೇಶಿಸ ದಂತೆ ಭದ್ರತಾ ವಲಯ ಸ್ಥಾಪಿಸಲಾಗಿದೆ. ಮತ ಎಣಿಕೆ ಪ್ರವೇಶಿಸುವ ಸಿಬ್ಬಂದಿ, ಅಭ್ಯರ್ಥಿ, ಏಜೆಂಟರ ಭಾವಚಿತ್ರವಿರುವ ಗುರುತು ಚೀಟಿ ತಪಾಸಣೆಗೆ ಸ್ಥಳೀಯ ಪೊಲೀಸರನ್ನು ನಿಯೋಜಿಸಲಾಗಿದೆ. 2ನೇ ಹಂತದ ಭದ್ರತೆಯನ್ನು ಮತ ಎಣಿಕೆ ಆವರಣದ ಮಧ್ಯದಲ್ಲಿ ಗೇಟು ನಿರ್ಮಿಸಿ ರಾಜ್ಯ ಶಸ್ತ್ರಸಜ್ಜಿತ ಪೊಲೀಸ್ ಪಡೆ ಹಾಕಲಾಗಿದೆ. ಈ ವ್ಯಾಪ್ತಿಗೆ ಯಾವುದೇ ಪ್ರತಿಬಂಧಕ ವಸ್ತು ಕೊಂಡೊಯ್ಯುವಂತಿಲ್ಲ. 3ನೇ ಹಂತದ ಭದ್ರತೆ ಕೇಂದ್ರ ಶಸ್ತ್ರಸಜ್ಜಿತ ಪೊಲೀಸ್ ಪಡೆಗಳನ್ನು ನಿಯೋಜಿಸಲಾಗಿದೆ.

## ಪ್ರಮುಖ ಅಂಶಗಳು

- ಮತ ಎಣಿಕೆ ಕೇಂದ್ರಕ್ಕೆ ಮೊಬೈಲ್, ಲ್ಯಾಪ್‌ಟಾಪ್, ಕ್ಯಾಮೆರಾ ಸೇರಿದಂತೆ ಯಾವುದೇ ಎಲೆಕ್ಟ್ರಾನಿಕ್ ವಸ್ತುಗಳನ್ನು ತರುವಂತಿಲ್ಲ.
- ಒಟ್ಟು 23,481 ಅಂಚೆ ಮತದಾನವಿದ್ದು ಶುಕ್ರವಾರದವರೆಗೆ 20,189 ಸಂಗ್ರಹವಾಗಿದೆ. ಶನಿವಾರ ಬೆಳಗ್ಗೆ ಬಹುತೇಕ ಎಲ್ಲ ಬ್ಯಾಲೆಟ್ ಪೇಪರ್ ಬರುವ ಸಾಧ್ಯತೆಯಿದೆ.
- ಮತ ಎಣಿಕೆಯ ಕೊಠಡಿಗಳಲ್ಲಿ ವೆಬ್ ಕಾಸ್ಟಿಂಗ್ ವ್ಯವಸ್ಥೆ ಮತ್ತು ಸಿಸಿಟಿವಿ ಅಳವಡಿಸಲಾಗಿದೆ.

Vijayavani, Date:13/05/23, p, no-02